# ಕರ್ನಾಟಕದ ಆಶ್ರಮಗಳಲ್ಲಿ ಆಧ್ಯಾತ್ಮಿಕ ಚಟುವಟಿಕೆಗಳು

**ಸ್ವಾಮಿ ಆತ್ಮಜ್ಞಾನಂದ**

ರಾಮಕೃಷ್ಣ ಆಶ್ರಮಗಳಲ್ಲಿ ನಡೆಯುವ ಪ್ರಧಾನ ಸೇವಾಕಾರ್ಯಗಳಲ್ಲಿ ಆಧ್ಯಾತ್ಮಿಕ ಚಟುವಟಿಕೆಗಳಿಗೆ ಮಹತ್ವದ ಸ್ಥಾನವಿದೆ. ಪೂಜೆ, ಉತ್ಸವ, ಮಂತ್ರದೀಕ್ಷೆ, ಆಧ್ಯಾತ್ಮಿಕ ಸಾಧನೆ, ಶಾಸ್ತ್ರಾಧ್ಯಯನ, ಪ್ರವಚನವೇ ಮುಂತಾದ ಕಾರ್ಯಗಳ ಮೂಲಕ ಇವು ಜನತೆಯ ಆಧ್ಯಾತ್ಮಿಕ ಬದುಕಿಗೆ ದಿವ್ಯತ್ರಯರ ಮಾರ್ಗವನ್ನು ತೋರಿಸಿಕೊಡುತ್ತವೆ. ಈ ಕುರಿತು ಬರೆದಿರುವ ಪೂಜ್ಯ ಸ್ವಾಮೀಜಿಯವರು ಹಿಂದೆ 'ವಿವೇಕಪ್ರಭ' ದ ಸಂಪಾದಕರಾಗಿದ್ದರು. ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರೂ ಆಗಿದ್ದ ಅವರು ಪ್ರಸ್ತುತ ಬ್ರೆಜಿಲ್‌ನ ರಿಯೋ ಡಿ ಜನೇರಿಯೋ ಆಶ್ರಮದ ಅಧ್ಯಕ್ಷರಾಗಿದ್ದಾರೆ.



ಶ್ರೀರಾಮಕೃಷ್ಣರ ಆರತಿ

ರಾಮಕೃಷ್ಣ ಸಂಘದ ಕೇಂದ್ರಗಳನ್ನು ರಾಮಕೃಷ್ಣ ಮಠ ಹಾಗೂ ರಾಮಕೃಷ್ಣ ಮಿಷನ್ ಕೇಂದ್ರಗಳೆಂದು ಕರೆಯಲಾಗುತ್ತದೆ. ಮಠವೆಂದು ಕರೆಯಲಾಗುವ ಕೇಂದ್ರಗಳಲ್ಲಿ ಪ್ರಮುಖವಾಗಿ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿರುತ್ತವೆ. ಮಿಷನ್ ಕೇಂದ್ರಗಳಲ್ಲಿ ಸೇವೆಯ ಕಾರ್ಯಕ್ರಮಗಳು ಪ್ರಧಾನ. ಆಸ್ಪತ್ರೆ, ಶಾಲೆ, ವಸತಿ ಸೌಲಭ್ಯಗಳುಳ್ಳ ಕಾಲೇಜು ಹಾಗೂ ಇನ್ನಿತರ ಸಂಸ್ಥೆಗಳಿಗೆ ಮಿಷನ್ ಎಂದು ಕರೆಯಲಾಗುತ್ತದೆ. ಇವೆರಡೂ ಅಂಗ ಸಂಸ್ಥೆಗಳಾಗಿದ್ದು ಇವುಗಳ ಮಧ್ಯೆ ಇರುವ ವ್ಯತ್ಯಾಸ ಕೇವಲ ಕಾನೂನಿನ ದೃಷ್ಟಿಯಿಂದ. ಎರಡೂ ರೀತಿಯ ಚಟುವಟಿಕೆಗಳಿರುವಲ್ಲಿ ಆಶ್ರಮವೆಂದೂ ಬಳಸಲಾಗುತ್ತದೆ. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಹಾಗೂ ಸಂನ್ಯಾಸವೆಂದು ನಾಲ್ಕು ಆಶ್ರಮಗಳನ್ನು ಹಿಂದೂಧರ್ಮ ಸಂಪ್ರದಾಯದಲ್ಲಿ ಕಾಣುತ್ತೇವೆ. ಆಧ್ಯಾತ್ಮಿಕ ಉನ್ನತಿಯನ್ನು ಹೊಂದಲು ಪ್ರತಿಯೊಂದು ಆಶ್ರಮದಲ್ಲೂ ವ್ಯಕ್ತಿಯು ಮಾಡಬೇಕಾದ ಕ್ರಿಯಾಕರ್ಮಗಳನ್ನು ಶಾಸ್ತ್ರಗಳು ವಿಧಿಸಿರುತ್ತವೆ. ಉತ್ತಮ ಜೀವನವನ್ನು ಸಾಧಿಸುತ್ತಾ, ವೈಯಕ್ತಿಕ ಹಾಗೂ ಸಾಮಾಜಿಕ ಪ್ರಗತಿಗೆ ಸಾಧನವಾಗುತ್ತಾ ಓರ್ವ ವ್ಯಕ್ತಿಯು ತನ್ನ ಜೀವನದ ಲಕ್ಷ್ಯವಾದ ಮೋಕ್ಷವನ್ನು ಹೇಗೆ ಪಡೆಯಬಹುದೆಂದು ಈ ಶಾಸ್ತ್ರಗಳು ತಿಳಿಸುತ್ತವೆ. ಶ್ರಮವೆಂದರೆ ಸಾಧನೆ. ಎಲ್ಲ ಕಾರ್ಯಗಳನ್ನು ಆಧ್ಯಾತ್ಮಿಕ ದೃಷ್ಟಿಯಿಂದ ಸಾಧನೆಯಾಗಿ ಮಾಡುವ ಸ್ಥಳ ಅಥವಾ ವ್ಯವಸ್ಥೆಯನ್ನು ಆಶ್ರಮವೆಂದು ಕರೆಯಲಾಗುತ್ತದೆ. ಇಲ್ಲಿನ ಚಟುವಟಿಕೆಗಳು ಪ್ರಾಪಂಚಿಕ ಆಸಕ್ತಿಯನ್ನು ಉತ್ತೇಜಿಸುವ ಲೌಕಿಕ ಕಾರ್ಯಗಳೆಂದು ಕಂಡುಬಂದರೂ ಅಂತಹ ಕ್ರಿಯೆಗಳ ಹಿನ್ನೆಲೆಯಲ್ಲಿ ಆಧ್ಯಾತ್ಮಿಕ ಸಾಧನೆಯ ದೃಷ್ಟಿಯೇ ಇರುತ್ತದೆ. ಆದ್ದರಿಂದಲೇ ಸ್ವಾಮಿ ವಿವೇಕಾನಂದರು ರಾಮಕೃಷ್ಣ ಸಂಘದ ಧ್ಯೇಯವನ್ನು, **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** ಎಂದು ನಿರ್ಧರಿಸಿದರು. ತನ್ನ ವೈಯಕ್ತಿಕ ಮೋಕ್ಷಸಾಧನೆಗಾಗಿ ಹಾಗೂ ಜಗತ್ತಿನ ಹಿತಕ್ಕಾಗಿ ಮಾಡುವ ಸಾಧನೆ ಎಂದು

ಇದನ್ನು ಅರ್ಥೈಸಬೇಕು. ಇವೆರಡೂ ಜೊತೆಜೊತೆಯಾಗಿಯೇ ಸಿದ್ಧಿಸುತ್ತವೆ; ಒಂದಕ್ಕೆ ಮತ್ತೊಂದು ಪೂರಕ. ಫಲಾಪೇಕ್ಷೆಯಿಲ್ಲದೆ ಭಗವದ್ ಪ್ರೀತಿಗಾಗಿ ಮಾಡುವ ಕ್ರಿಯೆಗಳೆಲ್ಲ ಸಾಧನೆಯಾಗುತ್ತವೆ. ಭಗವಂತನ ಅಥವಾ ಇಷ್ಟದೇವತೆಯ ನಾಮಸ್ಮರಣೆಯನ್ನು ಮಾಡುತ್ತಾ ಕೆಲಸವನ್ನು ಮಾಡುವುದು ಅಭ್ಯಾಸವಾದಾಗ ಎಲ್ಲ ಚಟುವಟಿಕೆಗಳೂ ಸಾಧನೆಗೆ ಪೂರಕವಾಗಿರುತ್ತವೆ. ಲೌಕಿಕ ಕೆಲಸಗಳಿಂದ ಚಿತ್ತವಿಕ್ಷೇಪ ಹಾಗೂ ಆತಂಕಗಳೇ ಕಂಡುಬರುತ್ತವೆ. ಸೇವಾಕಾರ್ಯಗಳಿಂದ ಪ್ರಸನ್ನತೆ ಹಾಗೂ ಎಲ್ಲರಲ್ಲೂ ಭಗವಂತನನ್ನು ಕಾಣುವ ಉನ್ನತ ದೃಷ್ಟಿ ಫಲಿಸುತ್ತವೆ. ದೈಹಿಕ ಅಥವಾ ಮಾನಸಿಕ ಕ್ರಿಯಗಳಿಲ್ಲದೆ ಜೀವನ ನಡೆಸುವುದು ಅಸಾಧ್ಯ. ಕರ್ಮದಲ್ಲಿ ಹಾಗೂ ಅದರ ಫಲಗಳಲ್ಲಿ ಆಸಕ್ತಿಯನ್ನು ಬಿಟ್ಟಾಗ ಅವು ಅಂತಹ ಕರ್ಮವು ಮನಃಶುದ್ಧಿಗೆ ಕಾರಣವಾಗುತ್ತದೆ. ಪ್ರಕೃತಿಸಹಜವಾದ ನಿತ್ಯಕರ್ಮಗಳನ್ನು ಕರ್ಮಯೋಗವನ್ನಾಗಿ ಪರಿವರ್ತಿಸುವ ಕಲೆಯೇ ಕರ್ಮಯೋಗದ ರಹಸ್ಯ. ಇದನ್ನು ಸ್ಪಷ್ಟಗೊಳಿಸುವ ಘಟನೆಯೊಂದನ್ನು ಉಲ್ಲೇಖಿಸುವುದು ಸೂಕ್ತ. ನಮ್ಮ ಸಂಘದ ಹಿರಿಯ ಸಂನ್ಯಾಸಿಗಳು ಹೇಳಿದ ಘಟನೆ: ಅವರು ಬ್ರಹ್ಮಚಾರಿಯಾಗಿ ಸೇರಿದಾಗ ಒಮ್ಮೆ ಬೆಳಗ್ಗೆಯ ಸಮಯ ಮತ್ತೋರ್ವ ವೃದ್ಧಸಂನ್ಯಾಸಿಯು ಪ್ರಾಂಗಣವನ್ನು ಗುಡಿಸುತ್ತಿರುವುದನ್ನು ನೋಡಿದರು. ನೀವು ಕಷ್ಟಪಡುವುದು ಬೇಡ, ನಾನು ಮಾಡುವೆನೆಂದು ಕಸಬರಿಕೆಯನ್ನು ತೆಗೆದುಕೊಳ್ಳಲು ಪ್ರಯತ್ನಿಸಿದರು. ಆ ವಯೋವೃದ್ಧ ಸಂನ್ಯಾಸಿ ಹೇಳಿದರು, ''ಸಹಾಯ ಮಾಡಲು ಆಸಕ್ತಿಯಿದ್ದರೆ ಮತ್ತೊಂದು ಕಸಬರಿಕೆಯನ್ನು ತಂದು, ಗುಡಿಸು. ನನ್ನ ಕೆಲಸ ನಿಲ್ಲಿಸಲಾರೆ.'' ನಂತರ ಮತ್ತೆ ವಿವರಿಸಿದರು. ''ಸ್ವಾಮಿ ವಿವೇಕಾನಂದರು ಕೆಲಸವೇ ಪೂಜೆಯೆಂದು ತಿಳಿಸಿದ್ದಾರೆ. ನಾನು ಪೂಜೆ ಮಾಡುತ್ತಿರುವಾಗ ನೀನು ನನ್ನನ್ನು ಪೂಜೆಯ ಆಸನದಿಂದ ಏಳುವಂತೆ ಮಾಡುವೆಯಾ?'' ಎಂದು ಕೇಳಿದರು. ನಾನು, ''ಹಾಗೇಕೆ ಮಾಡಲಿ? ಹೂವುಗಳನ್ನು ಕೀಳುವುದು, ಗಂಧ-ಚಂದನಗಳನ್ನು ತೇಯುವುದು ಇತ್ಯಾದಿ ರೀತಿಯಲ್ಲಿ ಸಹಾಯ ಮಾಡುವೆ,'' ಎಂದೆ. ಆಗ ಆ ಹಿರಿಯ ಸಂನ್ಯಾಸಿ ಹೇಳಿದರು, ''ನಾನು ಕಸ ಗುಡಿಸುತ್ತಿರಲಿಲ್ಲ. ಶ್ರೀರಾಮಕೃಷ್ಣರ ಪೂಜೆ ಮಾಡುತ್ತಿದ್ದೆ. ಪ್ರತಿಯೊಂದು ಕರ್ಮವನ್ನೂ ಪೂಜೆಯನ್ನಾಗಿ ಪರಿವರ್ತಿಸುವುದೇ ನಮ್ಮ ಸಂಘದ ಆದರ್ಶ. ಸ್ವಾಮಿ ವಿವೇಕಾನಂದರು ಇದನ್ನೇ ಬಯಸಿದ್ದು.''

ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಹೇಳುತ್ತಾನೆ, ''ಭಗವಂತನನ್ನು ತನ್ನ ಕರ್ಮಗಳಿಂದ ಆರಾಧಿಸಿ ಮನುಷ್ಯನು ಸಿದ್ಧಿಯನ್ನು ಹೊಂದುತ್ತಾನೆ.'' *(ಗೀತೆ, ೧೮-೪೬)*

ಆಶ್ರಮಗಳ ಚಟುಟಿಕೆಗಳೆಲ್ಲವೂ ಆಧ್ಯಾತ್ಮಿಕವೇ. ಅವುಗಳಲ್ಲಿ ಭಾಗವಹಿಸುವುದರಿಂದ, ಕೈಲಾದ ರೀತಿಯಲ್ಲಿ ಸಹಕರಿಸುವುದರಿಂದ ಸಾಧನೆಯಲ್ಲಿ ಮುಂದುವರಿಯಬಹುದು; ಭಗವಂತನಿಗೆ ಆರಾಧನೆಯನ್ನು ಸಲ್ಲಿಸಬಹುದು. ತನ್ಮೂಲಕ ಚಿತ್ತಶುದ್ಧಿ, ಭಕ್ತಿ-ಶ್ರದ್ಧೆಗಳಿಗೆ ಪಾತ್ರರಾಗಬಹುದು. ಸಮಗ್ರ ಜೀವನವೇ ಒಂದು ಸಾಧನೆಯಾದಾಗ, ಎಲ್ಲ ಕರ್ಮಗಳೂ ಮುಕ್ತಿಗೆ ಸೋಪಾನವಾದಾಗ ಆಧ್ಯಾತ್ಮಿಕ ಜೀವನ ಸುಮಧುರವಾಗುತ್ತದೆ. ದ್ವಂದ್ವ, ಸಂದೇಹಗಳು ದೂರವಾಗಿ ನಿಶ್ಚಯಮತಿ ಕೂಡಿ ಬರುತ್ತದೆ.

ರಾಮಕೃಷ್ಣ ಸಂಘದ ಎಲ್ಲ ಕೇಂದ್ರಗಳಲ್ಲೂ ಸಂಧ್ಯಾರತಿ, ಧ್ಯಾನ ಹಾಗೂ ನಿತ್ಯಪೂಜೆಗಳು ಸಾಮಾನ್ಯ. ಮಠದ ಚಟುವಟಿಕೆಗಳಿರುವ ಕೇಂದ್ರಗಳಲ್ಲಿ ದೇವಸ್ಥಾನದಲ್ಲಿ ಪೂಜೆ, ಶಾಸ್ತ್ರಗಳ ಪ್ರವಚನಾದಿಗಳು ಅಧಿಕವಾಗಿರುತ್ತವೆ. ಪ್ರತಿನಿತ್ಯ ಭಜನೆಗಳನ್ನು ಹಾಡುವುದೂ ರೂಢಿ. ಆಸ್ಪತ್ರೆ, ಶಾಲೆ, ಕಾಲೇಜುಗಳು ಇರುವ ಕೇಂದ್ರಗಳಲ್ಲಿ ಸೇವಾಕಾರ್ಯಗಳು ಪ್ರಧಾನ. ನೇಮಿಸಿಕೊಂಡಿರುವ ಸಿಬ್ಬಂದಿವರ್ಗದೊಂದಿಗೆ ಬ್ರಹ್ಮಚಾರಿ-ಸಂನ್ಯಾಸಿಗಳೇ ಸ್ವತಃ ವಿಭಿನ್ನ ಕರ್ಮಗಳನ್ನು ಮಾಡುವುದನ್ನು ಕಾಣಬಹುದು. ಆಯಾ ಸ್ಥಳದ ಭಕ್ತರ ಆವಶ್ಯಕತೆಗಳಿಗೆ ಅನುಸಾರವಾಗಿ ಅಲ್ಲಿನ ಕೇಂದ್ರಗಳ ಚಟುವಟಿಕೆಗಳು ರೂಪುಗೊಂಡಿರುತ್ತವೆ. ಪ್ರತಿಯೊಂದು ಕೇಂದ್ರವೂ ತನ್ನದೇ ಆದ ಶೈಲಿಯಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದು ಬೇಕಾದಷ್ಟು ವೈವಿಧ್ಯತೆಯನ್ನು ಗಮನಿಸಬಹುದು. ಸ್ಥಳೀಯ ಭಾಷೆ ಹಾಗೂ ಪರಂಪರೆಗಳಿಗೆ ಪ್ರಾಧಾನ್ಯತೆ ನೀಡುವುದು ವಿಶೇಷವಾಗಿ ಗಮನಿಸಬೇಕಾದ ಮತ್ತೊಂದು ವಿಚಾರ. ಸ್ಥಳೀಯ ಹಬ್ಬಗಳನ್ನು ಆಚರಿಸುವುದು, ಆಯಾ ಪ್ರಾಂತ್ಯದ ಸಂತರ ಜಯಂತಿಗಳನ್ನು ಆಚರಿಸುವುದು, ಸಾಂಪ್ರದಾಯಿಕ ಪೂಜೆಗಳನ್ನು ಅನುಸರಿಸುವುದು ಸಂಘದ ಪ್ರಗತಿಪರ ವಿಚಾರಗಳನ್ನು ತೋರಿಸುತ್ತದೆ. ಯಾವುದೇ ಒಂದು ಪಂಗಡ, ಜಾತಿ ಅಥವಾ ಸಂಪ್ರದಾಯಕ್ಕೆ ಸೀಮಿತವಲ್ಲ ಸಂಘದ ಕೇಂದ್ರಗಳು. ಎಲ್ಲ ಆಚರಣೆಗಳ ಮೂಲದಲ್ಲಿ ಭಗವತ್ ಕೇಂದ್ರೀಕೃತ ಮನಸ್ಸು ಮತ್ತು ಹೃದಯಗಳೇ ಮುಖ್ಯ. ಯಾವುದೇ ಸಂಕೋಚ, ದುಗುಡಗಳಿಲ್ಲದೆ ಎಲ್ಲ ವರ್ಗದವರೂ, ಧನಿಕರು, ಬಡವರು ಒಗ್ಗೂಡಿ ಇಲ್ಲಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ಗಮನಾರ್ಹ ಸಂಗತಿ. ಯಾರೊಬ್ಬರಿಗೂ ಪ್ರಾಧಾನ್ಯತೆ ನೀಡದೆ ಎಲ್ಲರನ್ನೂ ಸ್ವಾಗತಿಸುತ್ತದೆ ಆಶ್ರಮ.

ಚಟುವಟಿಕೆಗಳನ್ನು ಉಲ್ಲೇಖಿಸುವಾಗ ಮುಖ್ಯವಾಗಿ ಕಂಡುಬರುವುದು ದೇವಸ್ಥಾನದ ಪೂಜೆ - ಉತ್ಸವಗಳು, ಸಾಮೂಹಿಕ ಪ್ರಾರ್ಥನೆ-ಭಜನೆ ಹಾಗೂ ಸರಳ-ನಿರಾಡಂಬರ ರೀತಿಗಳು. ನಿತ್ಯಪೂಜೆಯಲ್ಲಿ ಯಾವುದೇ ಕಂಗೊಳಿಸುವ ಅಲಂಕಾರ ವಿಶೇಷಗಳಾಗಲೀ, ಆಚಾರಗಳಾಗಲೀ ಇಲ್ಲಿ ಕಂಡುಬರುವುದಿಲ್ಲ. ಶ್ರೀರಾಮಕೃಷ್ಣರು ಸರಳತೆ, ಶುದ್ಧತೆ ಹಾಗೂ ಭಕ್ತಿ-ಶ್ರದ್ಧೆಗಳಿಗೆ ಒತ್ತು ನೀಡಿದವರು. ವೈರಾಗ್ಯವೇ ಮೂರ್ತಿವೆತ್ತಂತೆ ಇದ್ದ ಅವರಿಗೆ ಯಾವುದೇ ಲೋಹ ಪದಾರ್ಥವನ್ನು ಮುಟ್ಟುವುದು ಅಸಾಧ್ಯವಾಗಿತ್ತು. ಆದ್ದರಿಂದ ಯಾವುದೇ ಕಿರೀಟ ಅಥವಾ ಆಭರಣಗಳನ್ನು ಬಳಸುವುದಿಲ್ಲ. ಪೂಜೆಯ ವಿಧಿಯಲ್ಲೂ ಆಂತರಿಕ ಪ್ರೀತಿ ಹಾಗೂ ಭಾವನೆ




ಪೂಜಾವಿಧಾನ

ಗಳಿಗೇ ಹೆಚ್ಚು ಪ್ರಾಶಸ್ತ್ಯ. ಸಾಧನೆಯೇ ಅದರ ಮೂಲ ಉದ್ದೇಶ. ಶ್ರೀಮಾತೆ ಶಾರದಾದೇವಿಯವರು ಪೂಜೆ ಮಾಡುತ್ತಿದ್ದಾಗ ಹೆಚ್ಚಾಗಿ ಮಂತ್ರ-ತಂತ್ರಗಳನ್ನು ಬಳಸುತ್ತಿರಲಿಲ್ಲ. ಶ್ರೀರಾಮಕೃಷ್ಣರನ್ನು ಒಲವಿನಿಂದ ಮಾತನಾಡಿಸುತ್ತ ಸೇವೆ ಸಲ್ಲಿಸುತ್ತಿದ್ದರು. ತಂತ್ರದಲ್ಲಿರುವ ಆಚರಣೆಗಳನ್ನು ವೈದಿಕ ಪದ್ಧತಿಯೊಂದಿಗೆ ಸೇರಿಸಿ ಸ್ವಾಮಿ ರಾಮಕೃಷ್ಣಾನಂದರು ಪೂಜೆಯ ವಿಧಿಯನ್ನು ರೂಪಿಸಿದರು. ಎಲ್ಲ ಕೇಂದ್ರಗಳೂ ಇದನ್ನೇ ಅನುಸರಿಸುತ್ತಿವೆ.

ಸೂರ್ಯಾಸ್ತದ ಸಮಯದಲ್ಲಿ ಎಲ್ಲ ಕೇಂದ್ರಗಳಲ್ಲೂ ಸಂಧ್ಯಾರತಿಯನ್ನು ಹಾಡುವ ಸಂಪ್ರದಾಯವಿದೆ. ಸ್ವಾಮಿ ವಿವೇಕಾನಂದರೇ ರಚಿಸಿ ರಾಗ ಸಂಯೋಜಿಸಿರುವ 'ಖಂಡನ ಭವ ಬಂಧನ' ಆರತಿಯ ಹಾಡು ಹಾಗೂ 'ಓಂ ಹ್ರೀಂ ಋತಂ' ಸ್ತೋತ್ರಗಳೊಂದಿಗೆ ಶ್ರೀದೇವೀಮಹಾತ್ಮ್ಯೆ ಅಥವಾ ಶ್ರೀ ಶ್ರೀ ಚಂಡಿಯ ಕೆಲವು ಶ್ಲೋಕಗಳನ್ನು ಹಾಡುವುದು ಪದ್ಧತಿ. 'ಖಂಡನ ಭವಬಂಧನ'ದಲ್ಲಿ ಅವತಾರ ತತ್ತ್ವ ಹಾಗೂ ಜೀವಿಗಳನ್ನು ಉದ್ಧರಿಸುವ ಅವತಾರ ಪುರುಷನ ಅಪಾರ ಕರುಣೆಗಳನ್ನು ಸುಮಧುರವಾದ ಕಲ್ಯಾಣಿ ರಾಗದಲ್ಲಿ ಸಂಯೋಜಿಸಿ ಸ್ವಾಮಿ ವಿವೇಕಾನಂದರು ಸಜ್ಜನರಿಗೆ ಆಧ್ಯಾತ್ಮಿಕ ಆನಂದವನ್ನು ಪಡೆಯುವಂತೆ ಮಾಡಿದ್ದಾರೆ. ನಾದಗಾಂಭೀರ್ಯದೊಂದಿಗೆ ಭಾವನೆಗಳನ್ನು ಮೇಳೈಸುವುದು ಅಸಾಮಾನ್ಯವೆಂದೇ ಹೇಳಬೇಕು. ನಟರಾಜ ಶಿವನ ಅವತಾರ ಸಂಭೂತರಾದ ಸ್ವಾಮೀಜಿಯಿಂದಲೇ ಇದು ಸಾಧ್ಯ. ಸ್ವಾಮಿ ಅಭೇದಾನಂದರೆ ರಚಿಸಿರುವ 'ಪ್ರಕೃತಿಂ ಪರಮಾಂ' ಎಂಬ ಸಂಸ್ಕೃತ ಸ್ತೋತ್ರವನ್ನು ಅನೇಕ ಕೇಂದ್ರಗಳಲ್ಲಿ ಆನಂತರ ಹಾಡುತ್ತಾರೆ. ಶ್ರೀಮಾತೆ ಶಾರದಾದೇವಿಯನ್ನು ಕುರಿತು ರಚಿಸಿರುವ ಈ ಹಾಡು ಮನೋಹರ. ಇದಾದ ಮೇಲೆ ದೇವದೇವಿಯರ ಕುರಿತು ಹಾಡುಗಳು, ಸ್ತೋತ್ರಗಳು, ನಾಮಾವಳಿಗಳನ್ನು ಹಾಡುವುದು ವಾಡಿಕೆ. ಎಲ್ಲ ಭಕ್ತರೂ ಕೂಡಿ ಹಾಡುವುದು ಹಲವಾರು ಕೇಂದ್ರಗಳಲ್ಲಿ ರೂಢಿ.

ಏಕಾದಶಿಯ ದಿನದಂದು 'ಶ್ರೀರಾಮನಾಮ ಸಂಕೀರ್ತನೆ' ಯನ್ನು ಹಾಡಲಾಗುತ್ತದೆ. ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಬ್ರಹ್ಮಾನಂದರು ದಕ್ಷಿಣ ಭಾರತಕ್ಕೆ ಭೇಟಿಯಿತ್ತಾಗ ಈ ಸ್ತೋತ್ರವನ್ನು ಕೇಳಿ, ಇದನ್ನು ಎಲ್ಲ ಕೇಂದ್ರಗಳಲ್ಲಿ ಏಕಾದಶಿಯಂದು ಹಾಡಬೇಕೆಂದು ಬಯಸಿದರು. ಅವರ ಶಿಷ್ಯರಾದ ಸ್ವಾಮಿ ಅಪೂರ್ವಾನಂದರು ಉತ್ತಮ ಗಾಯಕರು ಹಾಗೂ ಸಂಗೀತಜ್ಞರು. ಈ ಸಂಕೀರ್ತನೆಗೆ ಸರಿಯಾದ ರಾಗ ಸಂಯೋಜನೆಯನ್ನು ಮಾಡಿದರು. ಎಲ್ಲ ಕೇಂದ್ರಗಳಲ್ಲೂ ಇದನ್ನು ಹಾಡಲಾಗುತ್ತಿದೆ. ಕೆಲವಡೆ ಪೂರ್ಣಿಮೆಯ ಸಾಯಂಕಾಲದಂದು ಶ್ರೀ ಶ್ಯಾಮನಾಮ ಸಂಕೀರ್ತನೆಯನ್ನು ಹಾಡುತ್ತಾರೆ. ನವರಾತ್ರಿಯ ಸಮಯದಲ್ಲಿ ಶ್ರೀದುರ್ಗಾದೇವಿ ಹಾಗೂ ಶ್ರೀಕಾಳೀ ದೇವಿಯ ಹಾಡುಗಳನ್ನು ಹಾಡುವುದು ಬಂಗಾಳ ಹಾಗೂ ಉತ್ತರಭಾರತದ ಕೇಂದ್ರಗಳಲ್ಲಿ ಕಾಣಬಹುದು. ಕಬೀರ, ನಾನಕ್, ತುಲಸೀದಾಸ, ಸೂರದಾಸ, ಮೀರಾಬಾಯಿ, ಪುರಂದರದಾಸ, ಕನಕದಾಸ ಮುಂತಾದ ಸಂತ ಮಹಾತ್ಮರ ಹಾಡುಗಳನ್ನು ಹಾಡಿ ಭಗವಂತನ ಸ್ತುತಿಯನ್ನು ಮಾಡುವುದು ಸಾಮಾನ್ಯ. ಈ ಹಾಡುಗಳಲ್ಲಿ ಸಾಧನೆಗೆ ಪೂರಕವಾಗಿರುವ ಅತ್ಯುನ್ನತ ಭಾವನೆಗಳಿವೆ. ಭಕ್ತಿ-ಶ್ರದ್ಧೆಗಳನ್ನು ವರ್ಧಿಸುವ ಈ ಹಾಡುಗಳು ಎಲ್ಲರ ಅಚ್ಚುಮೆಚ್ಚು.



ಶ್ರೀರಾಮನಾಮ ಸಂಕೀರ್ತನೆ

ಉತ್ಸವಗಳಲ್ಲಿ ಶಿವರಾತ್ರಿ, ಶ್ರೀರಾಮನವಮಿ, ಶ್ರೀಕೃಷ್ಣಜನ್ಮಾಷ್ಟಮಿ, ಶ್ರೀಗುರುಪೂರ್ಣಿಮೆ, ಗಣೇಶನ ಹಬ್ಬ, ನವರಾತ್ರಿ, ದೀಪಾವಳಿ ಅಥವಾ ಶ್ರೀಕಾಳೀಪೂಜೆ, ಇತ್ಯಾದಿಗಳನ್ನು ಸಂಭ್ರಮದಿಂದ ಹಾಗೂ ಶಾಸ್ತ್ರವಿಹಿತ ಪೂಜಾಕರ್ಮಗಳೊಂದಿಗೆ ಆಚರಿಸಲಾಗುತ್ತದೆ. ಬಂಗಾಳ ಹಾಗೂ ಇನ್ನಿತರ ಪ್ರದೇಶದಲ್ಲಿ ಶ್ರೀದುರ್ಗಾಪ್ರತಿಮೆಯನ್ನು ರಚಿಸಿ ಅದ್ದೂರಿಯಾಗಿ ಪೂಜೆ ಮಾಡುತ್ತಾರೆ. ನವರಾತ್ರಿಯ ಸಮಯದಲ್ಲಿ, ಅಂತೆಯೇ ಶ್ರೀ ಸರಸ್ವತಿ ದೇವಿಯ ಪೂಜೆ, ಶ್ರೀಜಗದ್ಧಾತ್ರೀ ಪೂಜೆ, ಶ್ರೀ ಅನ್ನಪೂರ್ಣೆಯ ಪೂಜೆ, ಶ್ರೀವಿಶ್ವಕರ್ಮ, ಶ್ರೀಲಕ್ಷ್ಮೀ ಪೂಜೆಗಳೂ ನಡೆಯುತ್ತವೆ. ವರ್ಷದುದ್ದಕ್ಕೂ ಹಲವಾರು ಪೂಜೆಗಳನ್ನು ಆಚರಿಸುವುದರ ಮೂಲಕ ಸಾಧುಗಳು ಹಾಗೂ ಭಕ್ತರು ತಮ್ಮ ಆಧ್ಯಾತ್ಮಿಕ ಸಾಧನೆಗೆ ಪುಷ್ಟಿಯನ್ನು ನೀಡುತ್ತಾರೆ. ಶ್ರೀಶಂಕರಾಚಾರ್ಯರ ಜಯಂತಿ, ಶ್ರೀ ಮಧ್ವಾಚಾರ್ಯರ ಜಯಂತಿ, ಶ್ರೀರಾಮಾನುಜಾಚಾರ್ಯರ ಜಯಂತಿ, ಶ್ರೀ ಬುದ್ಧ ಜಯಂತಿ, ಶ್ರೀ ಮಹಾವೀರ ಜಯಂತಿ ಹಾಗೂ ಶ್ರೀ ಗುರುನಾನಕ್ ಜಯಂತಿಗಳನ್ನೂ ಕೆಲವು ಕೇಂದ್ರಗಳು ಆಚರಿಸುತ್ತವೆ. ಮಹಾಪುರುಷರ ಜೀವನ ಹಾಗೂ ಉಪದೇಶಗಳನ್ನೊಳಗೊಂಡ ಪ್ರವಚನಗಳನ್ನು ಕೂಡ ಆಯೋಜಿಸಲಾಗುತ್ತದೆ.

ಶ್ರೀ ಕಾಶೀಕ್ಷೇತ್ರದಲ್ಲಿರುವ ರಾಮಕೃಷ್ಣ ಸೇವಾಶ್ರಮದಲ್ಲಿ ಏಕಾದಶಿಯ ದಿನದಂದು ಶ್ರೀರಾಮನಾಮ ಸಂಕೀರ್ತನೆಯನ್ನು ಹಾಡುತ್ತಿರುವಾಗ ಭಕ್ತ ಹನುಮಂತ ಕೇಳುತ್ತಿದ್ದುದನ್ನು ಸ್ವಾಮಿ ಬ್ರಹ್ಮಾನಂದರು ಕಂಡರು. ಶ್ರೀರಾಮನ ಗುಣಗಾನ ಇದ್ದೆಡೆ ಮಾರುತಿಯ ಸಾನ್ನಿಧ್ಯವಿರುತ್ತದೆಯೆಂಬುದನ್ನು ಇದು ಸಾಬೀತು ಮಾಡುತ್ತದೆ. ಶ್ರೀದುರ್ಗಾಪೂಜೆಯನ್ನು ವೈದಿಕ ನಿಯಮಗಳಿಗೆ ಅನುಸಾರ ಮಾಡಿದರೆ, ಶ್ರೀಕಾಳೀ ಪೂಜೆಯನ್ನು ತಾಂತ್ರಿಕ ನಿಯಮಗಳಿಗೆ ಅನುಸಾರ ರಾತ್ರಿಯ ವೇಳೆಯಲ್ಲಿ ಮಾಡಲಾಗುತ್ತದೆ.

ಇದಲ್ಲದೆ ಶ್ರೀರಾಮಕೃಷ್ಣರ, ಶ್ರೀಶಾರದಾದೇವಿಯ, ಸ್ವಾಮಿ ವಿವೇಕಾನಂದರ, ಸ್ವಾಮಿ ಬ್ರಹ್ಮಾನಂದರ ಹಾಗೂ ಇನ್ನಿತರ ನೇರ ಶಿಷ್ಯರ ಜನ್ಮದಿನಗಳನ್ನು ಉತ್ಸವ ಸಂಭ್ರಮಗಳಿಂದ ಆಚರಿಸಲಾಗುತ್ತದೆ. ಬೇಲೂರು ಮಠ, ಕಾಮಾರಪುಕುರ, ಶ್ರೀರಾಮಕೃಷ್ಣರ ಜನ್ಮಸ್ಥಳಗಳಲ್ಲಿ ಶ್ರೀರಾಮಕೃಷ್ಣರ ಜಯಂತಿಯ ನಂತರ ದೊಡ್ಡ ಉತ್ಸವ, ಜಾತ್ರೆಗಳನ್ನು ಆಯೋಜಿಸಲಾಗುತ್ತದೆ. ಸುತ್ತ ಮುತ್ತಲ ಪ್ರದೇಶಗಳ

ಅಸಂಖ್ಯಾತ ಜನರು ಇವುಗಳಲ್ಲಿ ಪಾಲ್ಗೊಳ್ಳುತ್ತಾರೆ. ಗ್ರಾಮೀಣ ಸಂಸ್ಕೃತಿಗೆ ಹಾಗೂ ಶ್ರಮಜೀವಿಗಳಿಗೆ ಈ ಉತ್ಸವಗಳು ವರದಾನ.

ಪೂಜಾಕರ್ಮಗಳ ಹಿನ್ನೆಲೆಯಲ್ಲಿರುವ ತತ್ತ್ವ, 'ಅಂತರ್ಯದಲ್ಲಿ ಸುಪ್ತವಾಗಿರುವ ದೈವತ್ವವನ್ನು ಜಾಗೃತಗೊಳಿಸಿಕೊಂಡು ದೇವರನ್ನು ಆರಾಧಿಸುವುದು'. ಪೂಜೆಯನ್ನು ಸ್ವೀಕರಿಸಲು ಸಾಕ್ಷಾತ್ ಭಗವಂತ ಅನಂತ ಕರುಣೆಯಿಂದ ಆ ಸಮಯದಲ್ಲಿ ಪ್ರಸನ್ನನಾಗಿ ಮೂರ್ತಿಯಲ್ಲಿ ಅಥವಾ ಚಿತ್ರದಲ್ಲಿ ವ್ಯಕ್ತನಾಗುತ್ತಾನೆ ಎಂದು ಶ್ರೀಮಾತೆ ಹೇಳುತ್ತಿದ್ದರು. ಪೂಜೆ-ಸೇವೆಗಳನ್ನು ಭಕ್ತಿ-ಶ್ರದ್ಧೆಗಳಿಂದ ಮಾಡಿದಾಗ ಅವುಗಳನ್ನು ಸ್ವೀಕರಿಸುತ್ತಾನೆ ಎನ್ನುತ್ತಿದ್ದರು. ಭಜನೆಗಳನ್ನು ಹಾಡುವಾಗ ಭಗವಂತ ಕೇಳುತ್ತಿರುವನು ಎಂಬ ಭಾವನೆಯೊಂದಿಗೆ ಹಾಡಿದರೆ ಅದು ಸಾಧನೆಯಾಗುತ್ತದೆ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಪ್ರತಿಯೊಂದೂ ಕಾರ್ಯವನ್ನು ಸಂಪೂರ್ಣ ಮನಸ್ಸಿನಿಂದ, ಒಲವಿನಿಂದ ಮಾಡಿದಾಗ, ಕೆಲಸವೂ ಚೆನ್ನಾಗಿ ಆಗುತ್ತದೆ ಹಾಗೂ ವ್ಯಕ್ತಿಯ ಆಧ್ಯಾತ್ಮಿಕ ಉನ್ನತಿಗೆ ಕಾರಣವಾಗುತ್ತದೆ. ಈ ರೀತಿಯ ಕೆಲಸಗಳನ್ನು ಪೂಜ್ಯ ಸ್ವಾಮಿ ಗಂಭೀರಾನಂದಜಿ 'ಸೇವಾಯೋಗ' ಎಂದು ಕರೆದರು. ಎಲ್ಲ ಕ್ರಿಯೆಗಳ ಮೂಲಕ 'ಭಗವಂತನ ಆರಾಧನೆ' ಇದು ಎಲ್ಲ ರಾಮಕೃಷ್ಣ ಆಶ್ರಮ ಕೇಂದ್ರಗಳ ಚಟುವಟಿಕೆಗಳ ಹಿನ್ನೆಲೆಯಲ್ಲಿರುವ ತತ್ತ್ವ. ವೇದ-ಉಪನಿಷತ್ತುಗಳಲ್ಲಿ ಹೇಳಿರುವ ಸಾಧನೆಗಳನ್ನು ಆಧುನಿಕ ಕಾಲಕ್ಕನುಗುಣವಾಗಿ ಅನುಷ್ಠಾನಯೋಗ್ಯವನ್ನಾಗಿ ಮಾಡಿದ್ದಾರೆ ಸ್ವಾಮಿ ವಿವೇಕಾನಂದರು. ನಾವು ಸೇವೆಯನ್ನು ಮಾಡುತ್ತ ಧನ್ಯರಾಗುವ, ಪುನೀತರಾಗುವ ಹಾಗೂ ದಿವ್ಯತೆಯನ್ನು ಕಂಡುಕೊಳ್ಳುವ, ಎಲ್ಲರೊಂದಿಗೆ ಸೇರಿ ಮಾಡುವ ಕ್ರಿಯೆಗಳಿಂದ ನಮ್ಮ ಅಹಂಕಾರ, ಸಂಕುಚಿತ ಮನೋಭಾವಗಳಿಂದ ಮುಕ್ತರಾಗುವ.

ಇದಲ್ಲದೆ ರಾಮಕೃಷ್ಣ ಆಶ್ರಮಗಳ ಚಟುವಟಿಕೆಗಳಲ್ಲಿ ಬಹಳ ಮುಖ್ಯವಾದುದು ತ್ರಾಣ ಪರಿಹಾರ ಸೇವಾಕಾರ್ಯಗಳು. ಪ್ರಾಕೃತಿಕ ವಿಕೋಪಗಳು ಸಂಭವಿಸಿದಾಗ ಆರ್ತಜನರ ಸೇವೆಯ ಮೂಲಕ ಭಗವಂತನ ಆರಾಧನೆಯನ್ನು ಮಾಡುತ್ತದೆ ಆಶ್ರಮ. ದೇವಸ್ಥಾನದಲ್ಲಿ ಮಾಡುವ ಪೂಜೆಗಿಂತ ಈ ಪರಿಯ ಸೇವೆ ಯಾವುದೇ ರೀತಿಯಲ್ಲಿ ಕಡಿಮೆಯಿಲ್ಲ ಎನ್ನುತ್ತಿದ್ದರು ಸ್ವಾಮೀಜಿ. ಚರಾಚರ ಶಿವನ ಆರಾಧನೆ ಎಂದೂ ಹೇಳಿದ್ದಾರೆ.

ಕರ್ನಾಟಕದಲ್ಲಿರುವ ಅಧಿಕೃತ ರಾಮಕೃಷ್ಣ ಆಶ್ರಮಗಳಲ್ಲಿ ಬೆಂಗಳೂರಿನ ಬಸವನಗುಡಿಯಲ್ಲಿರುವ ಶ್ರೀರಾಮಕೃಷ್ಣ ಮಠಕ್ಕೆ ೧೯೧೧ರಲ್ಲಿ ಶ್ರೀಮಾತೆ ಶಾರದಾದೇವಿ ಹಾಗೂ ಶ್ರೀರಾಮಕೃಷ್ಣರ ನೇರ ಶಿಷ್ಯರಲ್ಲಿ ಅನೇಕರು ಭೇಟಿ ನೀಡಿ ಪವಿತ್ರಗೊಳಿಸಿದ್ದಾರೆ. ಶ್ರೀಮಾತೆ ಧ್ಯಾನಸ್ಥರಾಗಿ ಕುಳಿತು ಪಾವನಗೊಳಿಸಿದ ಶಿಲೆ ಇಲ್ಲಿದೆ. ಬೆಳಗಾವಿಯಲ್ಲಿರುವ ಆಶ್ರಮದಲ್ಲಿ ಸ್ವಾಮಿ ವಿವೇಕಾನಂದರು ಪರಿವ್ರಾಜಕ ದಿನಗಳಲ್ಲಿ ೯ ದಿನಗಳ ಕಾಲ ತಂಗಿದ್ದರು. ಈ ಪವಿತ್ರ ಸಂಬಂಧಗಳು ಆಶ್ರಮದ ಇತಿಹಾಸ ಹಾಗೂ ಚಟುವಟಿಕೆಗಳಿಗೆ ಒಂದು ಉನ್ನತ ಆಯಾಮವನ್ನು ನೀಡುತ್ತವೆ ಎಂದು ಹೇಳಲೇಬೇಕು. ಮೈಸೂರಿನ ರಾಮಕೃಷ್ಣ ಆಶ್ರಮವು ಕನ್ನಡ ಸಾಹಿತ್ಯದ ದಿಗ್ಗಜರಾದ ಕುವೆಂಪು, ಶಿವರುದ್ರಪ್ಪ, ಪ್ರಭುಶಂಕರ ಮುಂತಾದ ಸಾಹಿತಿಗಳಿಗೆ ತವರುಮನೆಯಾಗಿ ಸೇವೆ ಸಲ್ಲಿಸಿದೆ. ರಾಮಕೃಷ್ಣ-ವಿವೇಕಾನಂದ-ವೇದಾಂತ ಸಾಹಿತ್ಯದ ಪ್ರಕಟಣೆ ಮೈಸೂರು ಹಾಗೂ ಬೆಂಗಳೂರಿನ ಆಶ್ರಮಗಳ ಒಂದು ಪ್ರಮುಖ ಸೇವೆ. ಇದರ ಮೂಲಕ ಕನ್ನಡ ಸಾಹಿತ್ಯ ಜಗತ್ತು ಸಂಪದ್ಭರಿತವಾಗಿ ಶೋಭಿಸುತ್ತಿದೆ. ಜನರ ಹಾಗೂ ಸಮಾಜದ ಬೇಡಿಕೆಗಳಿಗನುಸಾರವಾಗಿ ಚಟುವಟಿಕೆಗಳು ಬೆಳೆಯುತ್ತಾ ಬಂದಿವೆ. ಮುಂದೆಯೂ ಅನೇಕ ರೀತಿಯಲ್ಲಿ ಇದರ ವಿಸ್ತಾರ ನಿಶ್ಚಿತ. ✽

## ದ್ವೈತದಿಂದ ಅದ್ವೈತದೆಡೆಗೆ

''ನಿನಗೀಗ ನಿನ್ನ ಹೆಸರು ಮತ್ತು ವ್ಯಕ್ತಿತ್ವದ ಅರಿವಿದೆ. ಈ ಅರಿವು ಯಾವಾಗ ಆತ್ಮನೊಂದಿಗೆ ಒಂದಾಗುವುದೋ ಆಗ ನಿನಗೆ ಅದ್ವೈತಾನುಭವ ಉಂಟಾಗುವುದು. ಅದ್ವೈತ ಅನುಭವವನ್ನು ಪಡೆಯಲು ದ್ವೈತ ಆರಾಧನೆ ಅಗತ್ಯ – ಏಕೆಂದರೆ ನಾವು ಈಗ ದ್ವೈತ ಪ್ರಪಂಚದಲ್ಲಿ ಜೀವಿಸುತ್ತಿದ್ದೇವೆ. ಆರಾಧನೆಯ ಮೂಲಕ ಭಗವಂತನೊಂದಿಗೆ ಆತ್ಮೀಯ ಸಂಬಂಧವನ್ನು ಬೆಳೆಸಿಕೊಳ್ಳುವುದರಿಂದ ಕ್ರಮೇಣ ದ್ವೈತಭಾವನೆಗಳು ಪರಿಶುದ್ಧಗೊಳ್ಳಬೇಕು. ಈಗ ನಮ್ಮ ಸಂಬಂಧ ಕೇವಲ ಪ್ರಪಂಚದೊಂದಿಗೆ ಇರುವುದು. ಪ್ರಪಂಚದೊಂದಿಗೆ ನಾವು ಬೆಳೆಸಿಕೊಂಡಿರುವ ಈ ಸಂಬಂಧ, ಆಸಕ್ತಿ ಇವನ್ನು ಕತ್ತರಿಸಿ, ಭಗವಂತನೊಂದಿಗೆ ಸಂಪರ್ಕವನ್ನು ಬೆಳೆಸಿಕೊಳ್ಳಬೇಕು. ಇದು ಸಂಪೂರ್ಣವಾಗಿ ಸಾಧ್ಯವಾದಾಗ, ದ್ವೈತಭಾವವು ತಾನಾಗಿಯೇ ಮಾಯವಾಗುವುದು. ಆಗ ಭಗವಂತ ಮಾತ್ರ , ಪರಮಾತ್ಮನೊಬ್ಬನೇ ಉಳಿಯುವನು. ಈ ಕ್ಷುದ್ರ 'ನಾನು' ಅಥವಾ ಅಹಂಕಾರ ಇಲ್ಲದಾಗುವುದು. ದ್ವೈತದಿಂದ ಅದ್ವೈತ ಸ್ಥಿತಿಗೇರಲು ಮಾಡಬೇಕಾದ ಸಾಧನೆ ಇಂತಹದು.

ಅದ್ವೈತ ಅನುಭವವನ್ನು ಹೊಂದಲು ಮಾಡಬೇಕಾದ ಇನ್ನೊಂದು ವಿಧಾನವೇ 'ನೇತಿ' 'ನೇತಿ' – ಇದಲ್ಲ, ಇದಲ್ಲ ಎನ್ನುವ ವಿವೇಕದ ಅಭ್ಯಾಸ. ಈ ಕ್ಷಣದಲ್ಲೇ ಎಲ್ಲವನ್ನೂ ನಿರಾಕರಿಸಿ, ''ನಾನು ಈ ದೇಹವಲ್ಲ, ಮನಸ್ಸಲ್ಲ, ಬುದ್ಧಿಯಲ್ಲ; ನಾನು ಸಚ್ಚಿದಾನಂದ ಆತ್ಮವೇ ಆಗಿದ್ದೇನೆ. ದೇಹ ಬಿದ್ದುಹೋದರೂ ನನಗೆ ಸಾವಿಲ್ಲ, ಸುಖ ದುಃಖಗಳು ಮನಸ್ಸಿನ ಸ್ವಭಾವಗಳೇ ಹೊರತು ನನ್ನವಲ್ಲ. ನಾನು ವಾಙ್ಮನಾತೀತನಾದ ಪೂರ್ಣ-ಅದ್ವಯ ಆತ್ಮ'' ಎಂದು ಚಿಂತಿಸಬೇಕು.

*—ಸ್ವಾಮಿ ತುರೀಯಾನಂದ ('Spiritual Treasures - Letters of Swami Turiyananda' ಗ್ರಂಥದಿಂದ)*